ಮಣ್ಣಾಕ, ನನ್ನ ಕೂಸನ ಏನ್ ಮಾಡ್ದ ಅಂತ ಹೇಳ್ದೆ ನೆಗೆದು ಬಿದ್ದ' ಕೈ ಲಟಿಕೆ ತಗ್ದು 'ಥೂ' ಅಂದ್ಲು, 'ಅವ್ವ ಅವನು ಸತ್ತು ಸುಣ್ಣ ಆದ, ಮತ್ತಾರಿಗೆ ಬೈತಿಯ ಸುಮ್ಕೆ ಮಲ್ಕೋ' ಎನ್ನುತ್ತಾ ಕಂಬಳಿ ಹೊದ್ದಕಂಡು ಮಲ್ಕಂಡೆ. ಇಂಥಾ ಕುಡುಕ ಅಪ್ಪನಿಂದ ಅವ್ವ ಏನ್ ಸುಖ ಪಟ್ಲು? ಚೆನ್ನಾಗಿ ಒದೆ ತಿಂದ್ಲು, ಅವನ ಕೆಟ್ಟ ಕೆಟ್ಟ ಬೈಗುಳನ ಹೊಟ್ಟೆಗೆ ಹಾಕಿಕೊಂಡ್ಲು ತಾನು ರಟ್ಟೆ ಮುರಿದು ದುಡಿದು ತಂದು ಅವನಿಗೆ ತುತ್ತಾಕಿದ್ಲು. ಅವ್ವಂಗೆ ನಮ್ಮ ಹೊಟ್ಟೆ ತುಂಬಿಸೋ ಯೋಚನೆ ಬಿಟ್ಟರೆ ನಮ್ಮನ್ನು ಸಾಲೆಗೆ ಹಾಕಬೇಕು ಅಂತಾನೂ ಗೊತ್ತಾಗಲೇ ಇಲ್ಲ. ಹೋಗ್ಲಿ ಕೂಸು ಕಾಣೆಯಾದಾಗ ಪೋಲೀಸ್ ಸ್ಟೇಷನ್‌ಗೆ ದೂರು ಕೊಡಲೂ ತಿಳಿಲಿಲ್ಲ. ಎಂಥ ಮೂಢಾತ್ಮರು, ಅವಿವೇಕಿಗಳು, ಅಜ್ಞಾನಿಗಳು, ಬಡತನ ಅಂದರೆ ಹಿಂಗೂ ಇರುತ್ತಾ? ಮೂರು ಕಾಸಿನ ಪ್ರಯೋಜನವಿಲ್ಲದ ಅಪ್ಪನ್ನ ಯಾಕೆ ಅವ್ವ ಸಹಿಸಿಕೊಂಡಳು? ನಾನು ಕಂಡಂಗೆ ಅವ ಅವ್ವನ ಜೊತೆ ಎಂದೂ ಚೆನ್ನಾಗಿ ಇದ್ದದ್ದನ್ನು ನೋಡಲೇ ಇಲ್ಲ, ಒಂದು ಪ್ರೀತಿ ಮಾತಾಡಲಿಲ್ಲ, ಯಾವ ಜವಾಬ್ದಾರಿನೂ ತಗೊಳ್ಳಲಿಲ್ಲ, ಒಂದು ದಿನವೂ ಒಂದು ಕಾಸನ್ನು ಮನೆಗೆ ಕೊಡಲಿಲ್ಲ. ಕಡೆಗೆ ತನ್ನ ಕೂಸನ್ನೇ ಹೆಂಡಕ್ಕೆ ಮಾರಿಕೊಂಡವನನ್ನು ಅವ್ವ ಯಾಕೆ ಸಹಿಸಿಕೊಂಡಳು? ಎಂಬ ನನ್ನ ಯಕ್ಷಪ್ರಶ್ನೆಗೆ ಉತ್ತರ ಸಿಗಲೇ ಇಲ್ಲ.

ಅಪ್ಪನ ಸಾವಿನೊಂದಿಗೆ ನನ್ನ ಬದುಕು ಮತ್ತೊಂದು ಮಗ್ಗಲಿಗೆ ಹೊರಳಿತು. ನಾನು ಕೆಲಸ ಮಾಡೋ ಮಂಡಿ ಸಾಹುಕಾರರು ಅವರ ಮನೆ ಹಿತ್ತಲ ಕೋಣೆಯೊಂದನ್ನು ನಮಗೆ ಬಿಟ್ಟುಕೊಟ್ಟರು. ಅವ್ವನ್ನು ಮನೆ ಹೊರಗಿನ ಕೆಲಸಕ್ಕೆ ತಕ್ಕಂಡರು. ಜೀವನದ ಗುಣಮಟ್ಟ ಸುಧಾರಿಸುತ್ತಾ ಹೋಯ್ತು. ಹೀಗೆ 3-4 ವರ್ಷ ಕಳೀತು. ನಮ್ಮ ಅಂಗಡಿಗೆ ಬರ್ತಾ ಇದ್ದ ಆಫೀಸರ್ ಒಬ್ಬರು, 'ನಿಂಗೆ ಕಾರು ಓಡಿಸಲು ಬರುತ್ತಾ?' ಕೇಳಿದರು. 'ಬರುತ್ತೆ ಸಾರ್' ಎಂದೇ ಡ್ರೈವಿಂಗ್ ಲೈಸನ್ಸ್ ಬಗ್ಗೆ ಕೇಳಿದರು. ಅದೇನು ಗೊತ್ತಿರಲಿಲ್ಲ, ಅವರೇ ಓಡಾಡಿ ಮಾಡಿಸಿಕೊಟ್ಟರು. ಹಾಗೆ ಒಂದು ದಿನ ಕಚೇರಿಗೆ ಕರೆದು ಕೆಲಸನೂ ಕೊಟ್ಟರು. ಕಚೇರಿಯ ಜೀಪ್ ಓಡಿಸುವ ಕೆಲಸ, ಕೈ ತುಂಬಾ ಸಂಬಳ ಬರುವ ಕೇಂದ್ರ ಸರ್ಕಾರಿ ಕೆಲಸ!



ನಮ್ಮ ಅಂಗಡಿ ಯಜಮಾರ್ರು ಆಗಾಗ ಕಾರ್ ಓಡ್ಸೋಕೆ ಕೊಡೋರು, ಹಂಗಾಗಿ ಡ್ರೈವರ್ ಕೆಲ್ಸ ಸಿಕ್ತು. ಶಾಲೆಗೆ ಸರ್ರಿ ಆಮೇಲೆ ಅಂಗಡಿಗೆ ಸರ್ರಿದ ರವಿ ಮಾಸ್ತರು, ಅಂಗ್ಡಿ ಯಜಮಾನ್ರು ಇಬ್ಬರೂ ನನ್ನ ಪಾಲಿನ ದೇವರಾದರು. ನಮ್ಮ ಆಫೀಸರ್ಗೆ ಜನ್ಮಯಾಪಿ ಋಣಿ ನಾನು.

'ಏನ್ರಿ ಟಿ.ವಿ. ಹಾಕಿದೆ. ನೀವು ನಿದ್ದೆ ಮಾಡ್ತಾ ಇದ್ದೀರಾ' ಅವಳ ದನಿ ಕಿವಿಗೆ ಬಿದ್ದಿದ್ದೇ ಎಚ್ಚರವಾಯ್ತು. ವಾಸ್ತವಕ್ಕಿಳಿದೆ. ನನ್ನ ಜೀವನದಲ್ಲಿ ಎಂಥ ಪವಾಡವೇ ಆಗಿಹೋಯ್ತು! ಹಸಿವಿನಿಂದ ಎದ್ದು ಬಂದ ನಾನು ಇಷ್ಟು ಒಳ್ಳೆಯ ಬದುಕನ್ನು ಬದುಕುತ್ತೇನೆ ಅಂತ ಕನಸೂ ಕಂಡಿರಲಿಲ್ಲ. ಅಪ್ಪಂದಿರ ದಿನಾಚರಣೆ ನನ್ನ ಬದುಕನ್ನು ಹಿಂತಿರುಗಿ ನೋಡುವಂತೆ ಮಾಡಿತು! ಅವ್ವ, ಸದಾ ರವಿ ಮಾಷ್ಟ್ರ ನೆನಪು ಮಾಡಕೋತ್ತಿರ್ತಾಳೆ.. ಆ ಜಂಗಮ ನಿನ್ನ ಸಾಲೆಗೆ ಹಾಕ್ದೆ ಹೋಗಿದ್ರೆ ನಮಗಿಂತ ಬದುಕು ಸಿಕ್ತಿತ್ತೇನ್ಲಾ? ದ್ಯಾವರಂಗೆ ಬಂದ ಕಪ ಬ್ಯಾಡ ಅಂದ್ರೂನೂವೆ ಬಿಡದೆ ಎಳ್ಕೊಂಡು ಬಂದನ್ಲಾ ಅವನೇ ನಮ್ಮ ಪಾಲಿನ ದ್ಯಾವ್ರು ಅಂತ ದಿನಕ್ಕೊಮ್ಮೆಯಾದರು ಹೇಳ್ತಇರ್ತಾಳೆ.

ಅಪ್ಪ ಹೇಗಿರಬಾರದು ಅನ್ನೋದಕ್ಕೆ ಉದಾಹರಣೆಯಾಗಿದ್ದ ನನ್ನ ಅಪ್ಪ. ಅಪ್ಪಂದಿರನ್ನು ವೈಭವೀಕರಿಸಿ ಇಡೀ ದಿನ ಬರುತ್ತಿದ್ದ ಅದೇ ಕಾರ್ಯಕ್ರಮ ನನ್ನನ್ನು ಅಣಕಿಸಿದಂತಾಗಿ ತಟ್ಟನೆ ಎದ್ದು ಟಿವಿ ಆಫ್ ಮಾಡಿದೆ. ●